

ಪಟ್ಲ ಸತೀಶ್ ಶೆಟ್ಟಿ ಅವರು ಇಲ್ಲಿ ಕಟ್ಟಿದ ಯಕ್ಷಗಾನ ತಂಡದಲ್ಲಿ ಸಕ್ರಿಯಳಾಗಿದ್ದೇನೆ. ಮಂಗಳೂರಿನ ಖ್ಯಾತ ವೈದ್ಯರಾದ ಬಿ.ಎಂ. ಹೆಗ್ಡೆ ಅವರನ್ನು ಇಲ್ಲಿಗೆ ಕರೆಸಿ ಉಪನ್ಯಾಸ, ಆರೋಗ್ಯ ಮಾಲಿಕೆ ಏರ್ಪಡಿಸಿ ಅರಿವು ಮೂಡಿಸುವ ಕೆಲಸವನ್ನೂ ಮಾಡುತ್ತಿದ್ದೇನೆ. ಸಂಗೀತ, ನೃತ್ಯ ಕಛೇರಿ ಏರ್ಪಡಿಸಿ, ದಾನಿಗಳಿಂದ ದೇಣಿಗೆ ಸಂಗ್ರಹಿಸಿ, ಬಡ ಕಲಾವಿದರ ಕಲ್ಯಾಣಕ್ಕೆ ಶ್ರಮಿಸುವ ಕಾರ್ಯವನ್ನೂ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಮಾಡುತ್ತಿದ್ದೇನೆ.

◆ **ಅಳಿವಿನಂಚಿಗೆ ಸರಿಯುತ್ತಿರುವ ಅಪೂರ್ವ ಕಲೆ ಜಾನಪದ. ಇದನ್ನು ಕಾಪಿಟ್ಟುಕೊಳ್ಳುವ ಕೆಲಸ ನೀವು ಅಮೆರಿಕದಲ್ಲಿ ಮಾಡುತ್ತಿದ್ದೀರಿ. ಈ ಬಗ್ಗೆ ವಿವರಿಸಿ.**

ನಾನು ಬಾಲ್ಯದಿಂದಲೂ ಜಾನಪದ ಕಲೆಯೊಂದಿಗೆ ವಿಶೇಷ ಅಭಿರುಚಿ ಇಟ್ಟುಕೊಂಡು ಬೆಳೆದವಳು. ನನ್ನ ಅಜ್ಜ ಬೆಳಿಗ್ಗೆ ರೇಡಿಯೊದಲ್ಲಿ ಪ್ರಸಾರವಾಗುತ್ತಿದ್ದ ಜಾನಪದ ಗೀತೆಗಳನ್ನು ತಪ್ಪದೇ ಕೇಳುತ್ತಿದ್ದರು. ಇದರಿಂದ ನನಗೂ ಜಾನಪದದಲ್ಲಿ ಆಸಕ್ತಿ ಬೆಳೆಯಿತು. ಈ ಆಸಕ್ತಿಯನ್ನು ಜತನವಾಗಿ ಕಾಪಿಟ್ಟುಕೊಳ್ಳುತ್ತಾ ಜಾನಪದ ಕಲೆ, ಗೀತೆ, ಸಂಸ್ಕೃತಿ, ಸೊಗಡಿನ ಬಗ್ಗೆ ಹೆಚ್ಚು ಜ್ಞಾನ ಪಡೆದೆ. ಇದನ್ನು ಅಮೆರಿಕದಲ್ಲಿರುವ ಕನ್ನಡ ಮಕ್ಕಳಿಗೂ ತಿಳಿಸಿ, ತರಬೇತಿ ನೀಡುತ್ತಿದ್ದೇನೆ.

ಇಲ್ಲಿನ ಮಕ್ಕಳಿಗೆ ಕನ್ನಡದ ಶ್ರೀಮಂತ ಪರಂಪರೆಯ ಬಗ್ಗೆ ಅರಿವಿಲ್ಲ. ಜಾನಪದದ ಬಗ್ಗೆ ಕಿಂಚಿತ್ತೂ ತಿಳಿಯದು. ಕೆಲ ಮಕ್ಕಳಿಗೆ ಶಾಸ್ತ್ರೀಯ ಸಂಗೀತದ ಬಗ್ಗೆ ಜ್ಞಾನ ಹಾಗೂ ಸಿನಿಮಾದ ಬಗ್ಗೆ ಕಲ್ಪನೆ ಇದೆ. ಆದರೆ ಈ ಮಕ್ಕಳಿಗೆ ಕನ್ನಡ ಸೊಗಡನ್ನು ಮನದಟ್ಟು ಮಾಡುವ ಪ್ರಯತ್ನ ನಿರಂತರವಾಗಿ ನಡೆದಿದೆ. ಇದರೊಂದಿಗೆ ಇಲ್ಲಿನ ನನ್ನ ಶಿಷ್ಯಂದಿರಿಗೆ ಕಂಸಾಳೆ, ವೀರಗಾಸೆ, ನಂದಿಧ್ವಜ ಕುಣಿತ, ಪೂಜಾ ಕುಣಿತದಂಥ ವಿಭಿನ್ನ ಕಲಾಪ್ರಕಾರಗಳನ್ನು ಕಲಿಸಿಕೊಡುತ್ತಿದ್ದೇನೆ.

ಮಕ್ಕಳ ಸರ್ವಾಂಗೀಣ ಕಲಾವಿಕಾಸ ಹಾಗೂ ಜಾನಪದದ ಸಂಪೂರ್ಣ ಹೂರಣವನ್ನು ತಿಳಿಸುವ ಸಲುವಾಗಿ ಜಾನಪದ ನೃತ್ಯ ತರಗತಿಗಳಲ್ಲಿ ಡಾನ್ಸ್ ಕಾಸ್ಟ್ಯೂಮ್ ಅನ್ನೇ ಹಾಕಿಸಿ ನೃತ್ಯ ಮಾಡಿಸುತ್ತೇನೆ. ಇದರಿಂದ ಜಾನಪದದ ಪರಿಕಲ್ಪನೆ ಮಕ್ಕಳ ಮನಸ್ಸಿನಲ್ಲಿ ಆಳವಾಗಿ ಬೇರೂರಲು ಸಾಧ್ಯವಾಗುತ್ತದೆ.

◆ **ಶಾಸ್ತ್ರೀಯ ನೃತ್ಯ, ಅದರಲ್ಲೂ ಭರತನೃತ್ಯದತ್ತ ನಿಮಗೆ ಒಲವು ಬೆಳೆದದ್ದು ಹೇಗೆ? ಇದನ್ನು ಅಮೆರಿಕದಲ್ಲಿ ಹೇಗೆ ಬಳಸಿಕೊಳ್ಳುತ್ತಿದ್ದೀರಿ?**

ನನ್ನ ನೃತ್ಯಗುರು ಗುರು ಶ್ರೀರಾಮು ಕೆ.ಎಸ್. ಅವರ ಬಳಿ ಚಿಕ್ಕವಳಿರುವಾಗಲೇ ಆರಂಭಿಕ ಪಾಠ ಹಾಗೂ ಗುರು ಶ್ವೇತಾ ನಿರ್ಮಲ್ ಅವರ ಬಳಿ ಭರತನೃತ್ಯದ ಹೆಚ್ಚಿನ ಅಭ್ಯಾಸ ಮಾಡಿದ್ದು, ಸದ್ಯ ಅಮೆರಿಕದಲ್ಲೂ ಅಭ್ಯಾಸ ಮುಂದುವರಿಸಿದ್ದೇನೆ. ಕಳೆದ 20 ವರ್ಷಗಳಿಂದ ನಾನು ಭರತನೃತ್ಯದ ವಿದ್ಯಾರ್ಥಿನಿಯೇ.

ವಾಷಿಂಗ್ಟನ್‌ನಲ್ಲಿ 'ಕಾರುಣ್ಯ' ಎಂಬ ನೃತ್ಯ ಕಾರ್ಯಕ್ರಮ ಆಯೋಜಿಸಿ ಇದರಲ್ಲಿ ಸಂಗ್ರಹವಾದ ಹಣವನ್ನು ಬೆಂಗಳೂರಿನ 'ಮಾರ್ಗ' ಎಂಬ ಲಾಭರಹಿತ ಎನ್‌ಜಿಒದಲ್ಲಿರುವ ಅಂಧ ಮಕ್ಕಳಿಗೆ ನೀಡಿದ್ದೇವೆ. ಅಮೆರಿಕದಾದ್ಯಂತ ಹಲವಾರು ಶಾಸ್ತ್ರೀಯ ನೃತ್ಯ ಬ್ಯಾಲೆಗಳಲ್ಲಿ ಭಾಗವಹಿಸಿ, ಇಲ್ಲೂ ಸಂಗ್ರಹಿಸಿದ ಹಣವನ್ನು ಕನ್ನಡದ ಅಂಧ ಮಕ್ಕಳಿಗೆ ನೀಡಿದ್ದೇನೆ.



ಅಮೆರಿಕದಲ್ಲಿ ಕನ್ನಡ ಮಕ್ಕಳು

◆ **ವಾಷಿಂಗ್ಟನ್‌ನಲ್ಲಿರುವ 'ಕನ್ನಡ ಭಾರತಿ' ಸಂಸ್ಥೆಯೊಂದಿಗೆ ನಿಮ್ಮ ಒಡನಾಟದ ಬಗ್ಗೆ ತಿಳಿಸಿ.**

'ಕನ್ನಡ ಭಾರತಿ' ಎಂಬುದು ಕರ್ನಾಟಕದ ಕಲೆ, ಸಂಸ್ಕೃತಿ, ಪರಂಪರೆಯನ್ನು ಇಲ್ಲಿ ಕಟ್ಟಿ ಬೆಳೆಸುವುದಕ್ಕಾಗಿಯೇ ಆರಂಭಿಸಲಾದ ಲಾಭರಹಿತ ಸಂಸ್ಥೆ. ಇಲ್ಲಿ ಕರ್ನಾಟಕ ಸಂಗೀತ ಭರತನಾಟ್ಯ, ಕಲೆ ಮತ್ತು ಇತರ ನೃತ್ಯಗಳನ್ನು ಆಸಕ್ತ ಮಕ್ಕಳಿಗೆ ಕಲಿಸಲಾಗುತ್ತದೆ. ಐದು ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳು ಇಲ್ಲಿ ಯಾವುದೇ ಕಲಾಪ್ರಕಾರಗಳನ್ನು ಕಲಿಯಬಹುದು. ಪ್ರತಿ ಭಾನುವಾರ ಕಲಾ ತರಗತಿಗಳನ್ನು ನಡೆಸಲಾಗುತ್ತದೆ.

ಎಲ್ಲಾದರು ಇರು ಎಂತಾದರು ಇರು
ಎಂದೆಂದಿಗೂ ನೀ ಕನ್ನಡವಾಗಿರು
ಕನ್ನಡವೇ ಸತ್ಯ, ಕನ್ನಡವೇ ನಿತ್ಯ

ರಾಷ್ಟ್ರಕವಿ ಕುವೆಂಪು ಅವರ ಈ ಅರ್ಥಪೂರ್ಣ ಗೀತೆಯಲ್ಲಿರುವ ಕನ್ನಡ ಪ್ರೇಮವನ್ನು ಅಮೆರಿಕದಲ್ಲಿ ಸಾಕಾರಗೊಳಿಸುತ್ತಿರುವುದು ನನಗೆ ಹೆಮ್ಮೆ ತಂದಿದೆ.

ರಮ್ಯಾ ಮಂಜುನಾಥ್ ಅವರ ಕನ್ನಡ ಮತ್ತು ನೃತ್ಯ ಕಾರ್ಯಕ್ರಮಗಳು ಯೂಟ್ಯೂಬ್‌ನಲ್ಲಿ ಲಭ್ಯ. ■